# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 389

ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ
ಉತ್ತರಿಸಬೇಕಾದ ದಿನಾಂಕ : 10.07.2023
ಉತ್ತರಿಸಬೇಕಾಗಿರುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ತಾಲ್ಲೂಕು ಆಸ್ಪತ್ರೆಗಳಿಗ ಮಂಜೂರಾಗಿರುವ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ತಜ್ಞ ವೈದ್ಯರ ಹುದ್ದೆಗಳ ಸಂಖ್ಯೆ ಎಷ್ಟು: (ವಿವರ ನೀಡುವುದು).</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ 4 ತಾಲ್ಲೂಕು ಆಸ್ಪತ್ರೆಗಳಿಗೆ ಮಂಜೂರಾಗಿರುವ, ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿಯಿರುವ ತಜ್ಞ ವೈದ್ಯರ ಹುದ್ದೆಗಳ ವಿವರ ಈ ಕೆಳಕಂಡಂತಿವೆ.
<table>
<tr><th>ತಾಲ್ಲೂಕು ಆಸ್ಪತ್ರೆ</th><th>ಮಂಜೂರಾದ ಹುದ್ದೆ</th><th>ಕಾರ್ಯನಿರತ</th><th>ಖಾಲಿ</th></tr>
<tr><td>ತಾಲ್ಲೂಕು ಆಸ್ಪತ್ರೆ ಬೆಳ್ತಂಗಡಿ</td><td>9+4=13</td><td>9+0=9</td><td>4 ತುರ್ತು ಚಿಕಿತ್ಸಾ ವೈದ್ಯಾಧಿಕಾರಿ</td></tr>
<tr><td>ತಾಲ್ಲೂಕು ಆಸ್ಪತ್ರೆ ಬಂಟ್ವಾಳ</td><td>9+4=13</td><td>7+1=8</td><td>3 ತುರ್ತು ಚಿಕಿತ್ಸಾ ವೈದ್ಯಾಧಿಕಾರಿ<br>ಅರವಳಿಕೆ ತಜ್ಞರು-1<br>ಪ್ರಸೂತಿ-1</td></tr>
<tr><td>ಸಾರ್ವಜನಿಕ ಆಸ್ಪತ್ರೆ ಪುತ್ತೂರು</td><td>11+4=15</td><td>10+3=13</td><td>1 ತುರ್ತು ಚಿಕಿತ್ಸಾ ವೈದ್ಯಾಧಿಕಾರಿ<br>ಸರ್ಜನ್-1</td></tr>
<tr><td>ತಾಲ್ಲೂಕು ಆಸ್ಪತ್ರೆ ಸೂಳ್ಯ</td><td>9+4=13</td><td>7+2=9</td><td>2 ತುರ್ತು ಚಿಕಿತ್ಸಾ ವೈದ್ಯಾಧಿಕಾರಿ<br>ಜನರಲ್ ಸರ್ಜನ್-1<br>ಪ್ರಸೂತಿ -1</td></tr>
</table>
</td></tr>
<tr><td>ಆ</td><td>ಸದರಿ ತಾಲ್ಲೂಕು ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರ ಕೊರತೆ ಜೊತೆಗೆ ಎಂಆರ್‌ಐ ಮತ್ತು ಡಯಾಲಿಸಿಸ್ ಯಂತ್ರಗಳ ಅಳವಡಿಕೆ ಮತ್ತು ನಿರ್ವಹಣೆಯಲ್ಲಿ ವ್ಯತ್ಯಯವಾಗಿರುವುದರಿಂದ, ಸಾರ್ವಜನಿಕರು ಉತ್ತಮ ಆರೋಗ್ಯ ಸೇವೆ ಪಡೆಯಲು ವಂಚಿತರಾಗುತ್ತಿರುವುದು ಸರ್ಕಾರದಗಮನಕ್ಕೆ ಬಂದಿದಿಯೇ:</td><td rowspan="2">ತಾಲ್ಲೂಕು ಆಸ್ಪತ್ರೆ ಬಂಟ್ವಾಳ ಮತ್ತು ಸುಳ್ಯ ಇಲ್ಲಿ ಪ್ರಸೂತಿ ತಜ್ಞರ ಹುದ್ದೆ ತೆರವಿದ್ದು, ಆನ್ ಕಾಲ್ ಮುಖಾಂತರ ನೇಮಕಾತಿ ಮಾಡಲಾಗಿದೆ. ಸದರಿ 4 ತಾಲೂಕು ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಯಂತ್ರಗಳನ್ನು ಅಳವಡಿಸಲಾಗಿದ್ದು, ಮೆ||ಎಸ್ಕಾಗ್ ಸಂಜೀವನಿ ಲಿಮಿಟೆಡ್ ಕೋಲ್ಕತ್ತ ಸಂಸ್ಥೆಯ ವತಿಯಿಂದ ಸಾರ್ವಜನಿಕರಿಗೆ ಸೌಲಭ್ಯ ನೀಡಲಾಗುತ್ತಿದೆ. ಎಂ.ಆರ್.ಐ ಸೌಲಭ್ಯವು ತಾಲೂಕು ಆಸ್ಪತ್ರೆಗಳಲ್ಲಿ ಇರುವುದಿಲ್ಲ.<br><br>ರಾಷ್ಟ್ರೀಯ ಆರೋಗ್ಯ ಅಭಿಯಾನದ ರಾಷ್ಟ್ರೀಯ ಉಚಿತ ರೋಗ ಪತ್ತೆ ಸೇವೆಗಳ ಕಾರ್ಯಕ್ರಮದ ಮಾರ್ಗಸೂಚಿಯನ್ವಯ ಪ್ರತಿ 7.5 ಲಕ್ಷಗಳ ಜನಸಂಖ್ಯೆಯುಳ್ಳ ಜಿಲ್ಲೆಗಳಲ್ಲಿ ಜಿಲ್ಲಾಮಟ್ಟದ ಆಸ್ಪತ್ರೆಗಳಲ್ಲಿ ಉಚಿತ ಎಂ.ಆರ್.ಐ., ಸ್ಕ್ಯಾನ್ ಸೇವೆಗಳನ್ನು ಒದಗಿಸಬೇಕಾಗಿರುತ್ತದೆ. ಇದರನ್ವಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾಮಟ್ಟದ ಆಸ್ಪತ್ರೆಗಳಲ್ಲಿ ಈ ಸೇವೆಗಳನ್ನು ಒದಗಿಸಲು ಅನುಷ್ಠಾನಗೊಳಿಸಲಾಗುತ್ತಿದೆ. ಆದ್ದರಿಂದ ಸಂಬಂಧಪಟ್ಟ ಜಿಲ್ಲೆಯಲ್ಲಿ ಎಂ.ಆರ್.ಐ ಸ್ಕ್ಯಾನ್ ಸೇವೆ ಅವಶ್ಯವಿದ್ದಲ್ಲಿ ಸಾರ್ವಜನಿಕರು ಜಿಲ್ಲಾ ಆಸ್ಪತ್ರೆ /ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯದ ಆಸ್ಪತ್ರೆಗಳಲ್ಲಿ ಪಡೆಯಬೇಕಾಗುವುದು.<br><br>ಹೊಸದಾಗಿ ದಿನಾಂಕ:27.06.2023ರಂದು ಡಯಾಲಿಸಿಸ್ ಸೇವೆಯನ್ನು ಒದಗಿಸಲು ಸೇವಾದಾರರು ಆಯ್ಕೆ ಮಾಡಿ, ಟೆಂಡರ್ ಪ್ರಚೂರ ಪಡಿಸಲಾಗಿದೆ. ಟೆಂಡರ್ ಅಂತಿಮಗೊಂಡ ನಂತರ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.</td></tr>
<tr><td>ಇ</td><td>ಬಂದಿದ್ದಲ್ಲಿ, ಈ ಎಲ್ಲಾ ಆಸ್ಪತ್ರೆಗಳಲ್ಲಿ ಬೇಡಿಕೆಗನುಗುಣವಾಗಿ ತಜ್ಞ ವೈದ್ಯರ ಲಭ್ಯತೆ ಹಾಗೂ ಎಂಆರ್‌ಐ ಮತ್ತು ಡಯಾಲಿಸಿಸ್ ಯಂತ್ರಗಳ ಸೂಕ್ತ ಅಳವಡಿಕೆ ಮತ್ತು ಪರಿಣಾಮಕಾರಿ ನಿರ್ವಹಣೆಗೆ ಸರ್ಕಾರ ಈ ಕೂಡಲೇ ಕ್ರಮವಹಿಸುವುದೇ ?</td></tr>
</table>

ಆಕುಕ 30 ಎಚ್‌ಎಸ್‌ಡಿ 2023

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು